# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/08/2020-21 ದಿನಾಂಕ : 06/02/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 06/02/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಉದಯ್ ಕುಮಾರ್, ನೀರು ಪರಿವೀಕ್ಷಕರು, ಬಿಡಬ್ಲ್ಯೂಎಸ್‌ಎಸ್‌ಬಿ

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ವಿದ್ಯಾರಣ್ಯಪುರ ವ್ಯಾಪ್ತಿಯ ಜ್ಞಾನೇಶ್ವರಿ ಬಡಾವಣೆ, ಟೆಲಿಕಾಂ ಬಡಾವಣೆ, ವಿರೂಪಾಕ್ಷಪುರ, ಸರ್.ಎಂ.ವಿ ಲೇಔಟ್‌ನಲ್ಲಿ ಬೆಲೆ ಬಾಳುವ ಮರಗಳಾದ ಮಹಾಗನಿ, ಸಂಪಿಗೆ, ತೇಗ, ಹೊಂಗೆ ಮರಗಳನ್ನು ರಾತ್ರೋರಾತ್ರಿ ಕತ್ತರಿಸಿ ಆ ಸ್ಥಳಗಳಲ್ಲಿ ಡಸ್ಟ್ ತುಂಬಿ ಮರಗಳ್ಳತನ ನಡೆಯುತ್ತಿರುವುದಾಗಿ ಹಾಗೂ ಹಲವಾರು ಒಣಗಿದ ಮರಗಳು ಶಿಥಿಲಾವಸ್ಥೆಯಲ್ಲಿದ್ದರೂ ಸಹ ಮರಗಳನ್ನು ಕತ್ತರಿಸದೆ ಹಾಗೆಯೇ ಬಿಟ್ಟಿರುತ್ತಾರೆ. ಇದರಿಂದ ಮರದ ರೆಂಬೆ ಕೊಂಬೆಗಳು ಯಾರ ತಲೆ ಮೇಲೆ ಬೇಕಾದರೂ ಬೀಳುವ ಸಂಭವವಿರುತ್ತದೆ ಆದ್ದರಿಂದ ವಾರ್ಡ್ ವ್ಯಾಪ್ತಿಯ ಮರಗಳನ್ನು ಸರ್ವೇ ಮಾಡಿ ಒಣಗಿರುವ ಹಾಗೂ ಶಿಥಿಲಾವಸ್ಥೆಯಲ್ಲಿರುವ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಕೋರಿದರು.
ಕ್ರಮ: ಉಪ ಅರಣ್ಯ ವಲಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ

ಬಿ.ಇ.ಎಲ್ ಬಡಾವಣೆ, ರಾಘವೇಂದ್ರ ಮಠದ ಪಕ್ಕದಲ್ಲಿ ಯಾವಾಗಲೂ ಸಗಣಿ ವಾಸನೆಯಿರುವುದರಿಂದ ಸದರಿ ಪ್ರದೇಶದಲ್ಲಿ ವಾಸಿಸುವ ನಿವಾಸಿಗಳಿಗೆ Respiratory Disease ನಂತಹ ಸಮಸ್ಯಗಳು ಹೆಚ್ಚಾಗುತ್ತಿರುವುದಾಗಿ, ಸದರಿ ಸ್ಥಳವು Encroachment or Alloted ಅಥವಾ ಸದರಿ ಸ್ಥಳದಲ್ಲಿ ಗೋಶಾಲೆ ನಿರ್ಮಿಸಲು ಅನುಮತಿ ನೀಡಿರುವ ಬಗ್ಗೆ ಮಾಹಿತಿ ಕೋರಿರುತ್ತಾರೆ.
ಜಿ.ಕೆ.ವಿ.ಕೆ ರಿಂಗ್ ರಸ್ತೆಯಲ್ಲಿ ಎಷ್ಟು ಬಾರಿ ತ್ಯಾಜ್ಯವನ್ನು ತೆರವುಗೊಳಿಸಿದರೂ ಪುನ: ಪುನ: ಕಸವನ್ನು ಎಸೆದು ಹೋಗುತ್ತಿರುವುದರಿಂದ ಮತ್ತೆ ಕಸದ ರಾಶಿ ಹರಡಿರುತ್ತದೆ. ಆದ್ದರಿಂದ ಸದರಿ ಸ್ಥಳದಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಿ ಕಸ ಎಸೆದು ಹೋಗುತ್ತಿರುವವರಿಗೆ ದಂಡ ವಿಧಿಸಲು ಕೋರಿರುತ್ತಾರೆ.
ಕ್ರಮ: ಸಕಾಅ, ಘ.ತ್ಯಾ.ನಿ

ಹೆಚ್.ಎಂ.ಟಿ ಬಡಾವಣೆಯಲ್ಲಿ 4 ದಿವಸಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದ್ದು, ಇತ್ತೀಚೆಗೆ ನೀರಿನ ಪೂರೈಕೆಯಲ್ಲಿ ಅಸ್ತವ್ಯಸ್ತವಾಗಿದ್ದು, ಬಿಡಬ್ಲ್ಯೂಎಸ್‌ಎಸ್‌ಬಿ ರವರನ್ನು ವಿಚಾರಿಸಲಾಗಿ ಮೋಟಾರ್ ಹಾಳಾಗಿರುವುದಾಗಿ ತಿಳಿದು ಬಂದಿರುತ್ತದೆ. ಮೋಟಾರ್‌ನ ದುರಸ್ಥಿ ಕಾರ್ಯದ ನಂತರ ನೀರನ್ನು ಸರಬರಾಜು ಮಾಡದೆ ಇನ್ನೂ 4 ದಿವಸದ ನಂತರ ನೀರನ್ನು ಪೂರೈಸುತ್ತಿರುವುದರಿಂದ ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆ ಉಂಟಾಗುತ್ತಿದ್ದು, ಸಮರ್ಪಕವಾಗಿ ನೀರನ್ನು ಪೂರೈಸಲು ಕೋರಿದರು.

ದುರ್ಗಾ ಲೇಔಟ್‌ನಲ್ಲಿ ಹೊಸದಾಗಿ ಕೊಳವೆ ಬಾವಿ ಕೊರೆದಿದ್ದು, ಬೇರೆ ಬಡಾವಣೆಗಳಿಗೆ ನೀರು ಪೂರೈಕೆಯಾಗುತ್ತಿದ್ದರೂ ಸಹ ದುರ್ಗಾ ಬಡಾವಣೆಗೆ ನೀರು ಸರಬರಾಜಾಗುತ್ತಿರುವುದಿಲ್ಲ.

ನೀರು ಸರಿಯಾಗಿ ಪೂರೈಕೆಯಾಗದಿದ್ದರೂ ಸಹ ನೀರಿನ ಬಿಲ್ ಬರುತ್ತದೆಂದು ದೂರಿದರು.

ನೀರಿನ ಬಿಲ್‌ಅನ್ನು ಪಾವತಿಸಲು ತಡವಾದರೆ ಬಿಡಬ್ಲ್ಯೂಎಸ್‌ಎಸ್‌ಬಿ ಸಿಬ್ಬಂದಿಗಳು ಬಂದು ಕೆಟ್ಟ ಶಬ್ದಗಳಿಂದ ನಿಂದಿಸಿ ಗಲಾಟೆ ಮಾಡುತ್ತಾರೆಂದು ದೂರಿದರು,

ಕ್ರಮ: ಸಕಾಅ ಬಿಡಬ್ಲ್ಯೂಎಸ್‌ಎಸ್‌ಬಿ

ಶ್ರೀರಾಮ ಅಪಾರ್ಟ್‌ಮೆಂಟ್ ರಸ್ತೆಯ 2 ಕಡೆಯಲ್ಲಿ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಿ ಚರಂಡಿಯ ಮೇಲೆ ಕವರಿಂಗ್ ಸ್ಲ್ಯಾಬ್ ಅಳವಡಿಸಲು ಹಾಗೂ ಸಿ.ಸಿ ಕ್ಯಾಮರಾವನ್ನು ಅಳವಡಿಸಲು, ತಿಂಡ್ಲು, ಎ.ಕೆ ಕಾಲೋನಿ ಸರ್ಕಾರಿ ಆಸ್ಪತ್ರೆ ಮುಂಭಾಗ ಚರಂಡಿ ಹಾಗೂ ರಸ್ತೆ ನಿರ್ಮಿಸಲು, ತಿಂಡ್ಲು ರಸ್ತೆಯಲ್ಲಿ ವೆಟ್‌ಮಿಕ್ಸ್ ಹಾಕಿ ಹಾಗೆಯೇ ಬಿಟ್ಟು ಹೋಗಿರುವುದರಿಂದ ರಸ್ತೆಯಲ್ಲಿ ಸಂಚರಿಸುವಾಗ ಅಪಘಾತಗಳು ಸಂಭವಿಸುವ ಸಾದ್ಯತೆ ಇರುತ್ತದೆಂದು ಸರಿಪಡಿಸಲು, ಜಿಕೆವಿಕೆ ಅಡ್ಡರಸ್ತೆಯಲ್ಲಿರುವ ಆರ್ಚ್‌ಅನ್ನು ದುರಸ್ಥಿಪಡಿಸಲು, ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ವಾಹನಗಳ ನಿಲುಗಡಯಾಗುತ್ತಿದ್ದು, ತಿಂಡಿ ತಿನಿಸುಗಳ ಗಾಡಿಗಳು ನಿಲುಗಡೆಯಾಗುತ್ತಿರುವುದರಿಂದ ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಲು, ಸಪ್ತಗಿರಿ ಬಡಾವಣೆಯಲ್ಲಿ 1ನೇ ಅಡ್ಡರಸ್ತೆಗೆ ಬದಲಾಗಿ 2ನೇ ಅಡ್ಡರಸ್ತೆ ಎಂಬುದಾಗಿ ತಪ್ಪು ತಪ್ಪಾಗಿ ನಾಮಫಲಕಗಳನ್ನು ಅಳವಡಿಸಿರುವುದರಿಂದ ಅಪರಿಚಿತರನ್ನು/ಸಾರ್ವಜನಿಕರನ್ನು ದಾರಿತಪ್ಪಿಸುವಂತಾಗುತ್ತದೆ ಆದ್ದರಿಂದ ಸರಿಪಡಿಸಲು ಕೋರಿದರು.

ಹೆಚ್.ಎಂ.ಟಿ ಲೇಔಟ್ 13ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ ಸಂದಿಸುವ ಸ್ಥಳದಲ್ಲಿ "Way to Somanna Garden" ಎಂದು ದಾರಿ ಸೂಚಿಸುವ ನಾಮಫಲಕವನ್ನು ಅಳವಡಿಸಲು ಕೋರಿದರು.

ಕ್ರಮ: ಸ.ಕಾ.ಅ, ವಿ.ಉ.ವಿ

ತಿಂಡ್ಲು, ಎ.ಕೆ ಕಾಲೋನಿ ಸರ್ಕಾರಿ ಆಸ್ಪತ್ರೆ ಹಿಂಭಾಗದ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಕೋರಿದರು.

ಕ್ರಮ: ಸಕಾಅ, ಬ್ಯನೀ.ಗಾ

ಸರ್ ಎಂ.ವಿ ಲೇಔಟ್, ವಿರೂಪಾಕ್ಷಪುರದಲ್ಲಿ ಆಗಾಗ ಕಳ್ಳತನವಾಗುತ್ತಿದ್ದು, ದೂರು ನೀಡಿದರೆ ಯಾವುದೇ ಕ್ರಮ ಕೈಗೊಳ್ಳುತ್ತಿರುವುದಿಲ್ಲ. ಹಾಗೂ ಸುಮಾರು 4–5 ಹುಡುಗರು ರಾತ್ರಿ ಸಮಯದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದಾರೆಂದು ದೂರು ನೀಡಿದರು.

ಕ್ರಮ: ಪೋಲೀಸ್ ಇನ್ಸ್‌ಪೆಕ್ಟರ್, ವಿದ್ಯಾರಣ್ಯಪುರ

ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, 4–5 ಜನಗಳಿಗೆ ನಾಯಿ ಕಚ್ಚಿರುತ್ತದೆಂದು ದೂರು ನೀಡಿದರು.

ಕ್ರಮ: ಜಾನುವಾರು ಅಧಿಕಾರಿ, ಪಶುಪಾಲನೆ

ತಿಂಡ್ಲು, ಎ.ಕೆ ಕಾಲೋನಿ ಸರ್ಕಾರಿ ಆಸ್ಪತ್ರೆ ಹಿಂಭಾಗ ವಿದ್ಯುತ್ ಕಂಬವನ್ನು ನಿರ್ಮಿಸಿ ದೀಪದ ವ್ಯವಸ್ಥೆ ಮಾಡಲು ಕೋರಿದರು.

ಬೆಸ್ಕಾಂ ಕಛೇರಿಯನ್ನು ಟಾಟಾ ನಗರಕ್ಕೆ ಸ್ಥಳಾಂತರಿಸಿರುವುದರಿಂದ ವಾರ್ಡ್ ನಂ 09ರ ವಿದ್ಯಾರಣ್ಯಪುರ ವ್ಯಾಪ್ತಿಯ ಸಾರ್ವಜನಿಕರು ಬೆಸ್ಕಾಂಗೆ ಸಂಬಂಧಿಸಿದ ಸಮಸ್ಯಗಳ ವಿಚಾರಣೆ ಮಾಡಲು ಟಾಟಾ ನಗರಕ್ಕೆ ಹೋಗಬೇಕಾಗುತ್ತದೆ, ಟಾಟಾ ನಗರಕ್ಕೆ ವಿದ್ಯಾರಣ್ಯಪುರದಿಂದ ಸಂಚಾರ ವ್ಯವಸ್ಥೆ ಸಮರ್ಪಕವಾಗಿ ಇಲ್ಲದೆ ಇರುವುದರಿಂದ ಆಟೋ, ಓಲಾ, ಉಬರ್‌ಗಳ ಮೊರೆ ಹೋಗಲು ಸಾಕಷ್ಟು ಹಣ ಖರ್ಚು ಮಾಡಬೇಕಾಗುತ್ತದೆ ಇದರಿಂದ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆ ಉಂಟಾಗಿರುತ್ತದೆ. ಆದ್ದರಿಂದ ಬೆಸ್ಕಾಂ ಕಛೇರಿಯನ್ನು ಮತ್ತೆ ವಿದ್ಯಾರಣ್ಯಪುರಕ್ಕೆ ಸ್ಥಳಾಂತರಿಸಲು ಕೋರಿದರು.

ಕ್ರಮ: ಬೆಸ್ಕಾಂ

ದುರ್ಗಾ ಬಡಾವಣೆಯಲ್ಲಿ ಸ್ವತ್ತಿನ ಸಂಖ್ಯೆಗಳು ಕ್ರಮವಾಗಿರದೆ ಅನುಕ್ರಮವಾಗಿರುವುದರಿಂದ ಸಾರ್ವಜನಿಕರು ಗೊಂದಲಕ್ಕೆ ಎಡೆ ಮಾಡಿಕೊಟ್ಟಿರುತ್ತದೆ. ಆದ್ದರಿಂದ ಸ್ವತ್ತಿನ/ನಿವೇಶನಗಳ ಹಳೆ ಸಂಖ್ಯೆಗಳ ಜೊತೆಯಲ್ಲಿಯೇ ಹೊಸ ಸಂಖ್ಯೆಗಳನ್ನು ಕ್ರಮವಾದಿ ನೀಡಲು ಕೋರಿದರು.

ಕ್ರಮ: ಸ.ಕಂ.ಅ, ವಿ.ಉ.ವಿ

ಪ್ರತಿ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ಹಾಜರಾಗದೆ ಇರುವುದರಿಂದ ವಾರ್ಡ್‌ನ ಕುಂದುಕೊರತೆಗಳನ್ನು ಬಗೆಹರಿಸಲು ಕಷ್ಟಕರವಾಗುತ್ತದೆ, ಅಧಿಕಾರಿಗಳು ಹಾಜರಾಗದೆ ಸಮಸ್ಯ ಬಗೆಹರಿಯುವುದಿಲ್ಲ, ಸಮಸ್ಯ ಬಗೆಹರಿಯದ ಪಕ್ಷದಲ್ಲಿ ವಾರ್ಡ್ ಸಮತಿ ಸಭೆ ಮಾಡಿ ಪ್ರಯೋಜನವಿರುವುದಿಲ್ಲ ಆದ್ದರಿಂದ ಎಲ್ಲಾ ಇಲಾಖೆಯ ಅಧಿಕಾರಿಗಳ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕೋರಿದರು.

**ನೋಡೆಲ್ ಅಧಿಕಾರಿ**: ಶ್ರೀ ಶಿವಕುಮಾರ್ ಗೌಡರ್ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Division
BBMP, Bangalore - 97

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.